**O.S. 32-21 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 21.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 4 ರಿಂದ 6 ರ ಪರ ಶ್ರೀ C H S, ವಕೀಲರಿಂದಃ**

12. ಕೇಸ್ ಹಾಕುವವರೆಗೂ ನಾನು ಹಾಗೂ ಒಂದನೇ ಪ್ರತಿವಾದಿ ಹೊಂದಾಣಿಕೆ ಮಾಡಿಕೊಂಡಿದ್ದೆವು ಅಂದರೆ ಸರಿ. ಪರಸ್ಪರ ಸಹಾಯ ಮಾಡುತ್ತಿದ್ದೆವು ಅಂದರೆ ಸರಿಯಲ್ಲ. ಒಂದನೇ ಪ್ರತಿವಾದಿಯ ಮನೆಯಲ್ಲಿ ಆದ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇತ್ತು ಅಂದರೆ ಸರಿಯಲ್ಲ. ನಮ್ಮ ತಂದೆ ಮರಣ ಹೊಂದಿದ ನಂತರ ಒಂದನೇ ಪ್ರತಿವಾದಿ ಮನೆತನದ ವ್ಯವಹಾರ ಮಾಡುತ್ತಿದ್ದನು. ನಮ್ಮ ತಂದೆ ಮರಣದ ನಂತರ ದಾವೆ ಸಲ್ಲಿಸುವವರೆಗೂ ತವರು ಮನೆಗೆ ಹೋಗಿ ಬರುತ್ತಿದ್ದೆವು. ನಾವು ತವರು ಮನೆಗೆ ಹೋದಾಗ ಜಮೀನಿನ ಬಗ್ಗೆ ಹಾಗೂ ಉತಾರದ ಬಗ್ಗೆ ಮಾಹಿತಿ ತೆಗೆದುಕೊಂಡು ಬರುತ್ತಿದ್ದೆವು ಅಂದರೆ ಸರಿಯಲ್ಲ. ಒಂದನೇ ಪ್ರತಿವಾದಿ ಮನೆಯಲ್ಲಿ ಏನೂ ವ್ಯವಹಾರ ಆಗುತ್ತಿದೆ ಎಂದು ಮಾಹಿತಿ ತೆಗೆದುಕೊಂಡು ಬರುತ್ತಿದ್ದೆವು ಅಂದರೆ ಸರಿಯಲ್ಲ. ದಾವೆ ಸಲ್ಲಿಸುವವರೆಗೂ ನಾವು ಎಲ್ಲಾ ಜಮೀನುಗಳಿಗೆ ಹೋಗಿ -ಬಂದು ಮಾಡುತ್ತಿದ್ದೆವು ಅಂದರೆ ಸರಿಯಲ್ಲ. ದಾವೆ ಸಲ್ಲಿಸಿದ ನಂತರ ಜಮೀನುಗಳನ್ನು ನೋಡಿಕೊಂಡು ಬಂದಿಲ್ಲ. ಎಲ್ಲೆಲ್ಲಿ ತವರು ಮನೆ ಆಸ್ತಿಗಳು ಇವೆ ಎಂದು ಗೊತ್ತಿಲ್ಲ. ಜಮೀನುಗಳ ಸರ್ವೆ ನಂಬರ ಹಾಗೂ ಚಕ್ಕುಬಂದಿ ಹೇಳಲಾಗುವುದಿಲ್ಲ. ನಾನೊಬ್ಬಳೇ ಈ ಕೇಸ ಹಾಕಿದ್ದೇನೆ. ಈ ದಾವೆಯನ್ನು ಮಾಡುವಾಗ ಈ ದಾವೆಯಲ್ಲಿ ಯಾವ ಯಾವ ಆಸ್ತಿಗಳಿವೆ ಹಾಗೂ ಯಾರು ಯಾರು ಪಕ್ಷಗಾರರರಿದ್ದಾರೆಂದು ಮಾಹಿತಿ ಇಲ್ಲ. ನಾನು ದಾವೆ ಸಲ್ಲಿಸಿದ ನಂತರ ಇಲ್ಲಿಯವರೆಗೂ ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ನನಗೆ ದಾವಾ ಆಸ್ತಿಗಳ ಬಗ್ಗೆ ಏನೂ ವ್ಯವಹಾರವಾಗಿದೆ ಹಾಗೂ ಯಾರ ಯಾರ ಹೆಸರಿನಲ್ಲಿವೆ ಎಂದು ಮಾಹಿತಿ ಇಲ್ಲ. ಸಂಬಂಧಪಟ್ಟ ದಾಖಲೆಗಳನ್ನು ತೆಗೆದುಕೊಂಡು ನೋಡಿದ್ದೀರಾ ಅಂದರೆ ಅದರ ಅವಶ್ಯಕತೆ ಇಲ್ಲ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.